## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 19-08-2022

### ಬೀದರ ನೂತನ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 147/2022 ಕಲಂ 379 ಐಪಿಸಿ :-

ದಿನಾಂಕ 18/08/2022 ರಂದು 0700 ಗಂಟೆಗೆ ಫಿರ್ಯಾದುದಾರರಾದ ಶ್ರೀ. ಶಂಕ್ರೆಪ್ಪ ತಂದೆ ರಾಚಪ್ಪ ಪಾಟೀಲ ವಯ:51 ವರ್ಷ ಜಾತಿ:ಲಿಂಗಾಯತ ಉ:ವ್ಯಾಪಾರ ಸಾ/ನ್ಯೂ ಹೌಸಿಂಗ ಕಾಲೋನಿ ಬೀದರ ಹಳೆ ಬಸ್ ನಿಲ್ದಾಣದ ಹಿಂದುಗಡೆ ಬೀದರ ರವರು ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದರ ಸಾರಾಂಶವೆನಂದರೆ ಇವರು ನ್ಯೂ ಹೌಸಿಂಗ ಕಾಲೋನಿಯಲ್ಲಿ ಜನರು ಸೇರಿಕೊಂಡು ಸುಮಾರು 35 ವರ್ಷಗಳ ಹಿಂದೆ ಓಣಿಯಲ್ಲಿ ಮನೆಯ ಹತ್ತಿರ ಒಂದು ಮಹಾಲಕ್ಷ್ಮಿ ದೇವಿಯ ಮಂದಿರವನ್ನು ಸ್ಥಾಪಿಸಿದ್ದು ಇರುತ್ತದೆ. ಮಂದಿರಲ್ಲಿ ಶ್ರೀ. ರಮಾಕಾಂತ ತಂದೆ ನಾರಾಯಣರಾವ ಜೋಷಿ ರವರಿಗೆ ಪೂಜಾರಿಯಾಗಿ ನೇಮಿಸಿದ್ದು ಇರುತ್ತದೆ. ಹೀಗಿರುವಾಗ ದಿನಾಂಕ 18/08/2022 ರಂದು ಮುಂಜಾನೆ 6:00 ಗಂಟೆಗೆ ಎದ್ದು ಮನೆಯಿಂದ ಹೊರಗೆ ಬಂದು ನೋಡಿದಾಗ ಮಂದಿರದ ಬಾಗಿಲಿನ ಬೀಗ ಮುರಿದಿದ್ದು ಹಾಗು ಬಾಗಿಲು ಕೂಡ ಹಾಳು ಮಾಡಿದ್ದು, ಮಂದಿರಲದ್ಲಿ ಹೋಗಿ ನೋಡಿದಾಗ ಮಂದಿರಲ್ಲಿಯ ದೇವಿ ಮೂರ್ತಿಯ ಮೇಲೆ ಹಾಕಿದ ಒಂದು ಗ್ರಾಂ ತೂಕದ ಗುಂಡಿನ ಸರ ಅ.ಕಿ. 4,500/-ರೂ. ಹಾಗು ಅರ್ಧ ಗ್ರಾಂ ತೂಕದ ಮಂಗಳಸೂತ್ರ ಅ.ಕಿ.2,225/-ರೂ. ನೇದನ್ನು ಯಾರೊ ಕಳ್ಳರು ಕಳವು ಮಾಡಿಕೊಂಡು ಹೋಗಿದ್ದು ಇರುತ್ತದೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

### ಹಳ್ಳಿಖೇಡ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 80/2022 ಕಲಂ 78(3) ಕೆಪಿ ಕಾಯ್ದೆ :-

ದಿನಾಂಕ 18/08/2022 ರಂದು ಪಿಎಸ್ಐ ರವರು ಠಾಣೆಯಲ್ಲಿದ್ದಾಗ ಮುಗನೂರ ಗ್ರಾಮದ ಅಕ್ಕಮಹಾದೇವಿ ಚೌಕ ಹತ್ತಿರ ಸಾರ್ವಜನಿಕ ರಸ್ತೆ ಮೇಲೆ ಅಕ್ರಮವಾಗಿ ಮಟ್ಕಾ ಅಂಕೆ ಸಂಖ್ಯೆ ಬರೆದುಕೊಳ್ಳುತ್ತಿರುವದಾಗಿ ಭಾತ್ಮಿ ಬಂದಿದ ಮೇರೆಗೆ ಸಿಬ್ಬಂದಿಯೊಂದಿಗೆ ಹೋಗಿ ನೋಡಿ ಅಕ್ಕಮಹಾದೇವಿ ಚೌಕ ಹತ್ತಿರ ಸಾರ್ವಜನಿಕ ರಸ್ತೆ ಮೇಲೆ ಮಾಟ್ಕಾ ಜೂಜಾಟ ನಡೆಸುತ್ತಿರುವ ವ್ಯಕ್ತಿ ಮೇಲೆ ದಾಳಿ ಮಾಡಿ ಹಿಡಿದು ಅವನಿಗೆ ವಿಚಾರಿಸಲು ಅವನ ಹೆಸರು ವಿರೇಶ ತಂದೆ ಬಸಯ್ಯಾ ಮಠಪತಿ ವಯ: 25 ವರ್ಷ ಜಾತಿ: ಸ್ವಾಮಿ ಉ: ಕಾರಡ್ರೈವರ ಸಾ// ಮುಗನೂರ ಅಂತಾ ತಿಳಿಸಿದ್ದು ನಂತರ ಅವನ ಹತ್ತಿರ ಇದ್ದ ಮಟಕಾ ಜೂಜಾಟಕ್ಕೆ ಸಂಬಂಧಪಟ್ಟ ಒಟ್ಟು 1120/- ರೂ ನಗದು, ಒಂದು ಬಾಲ ಪೆನ್ನ, 1 ಮಟಕಾ ಅಂಕಿ ಸಂಖ್ಯೆ ಚೀಟಿ ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

### ಬೀದರ ಗ್ರಾಮೀಣ ಠಾಣೆ ಅಪರಾಧ ಸಂಖ್ಯೆ 57/2022 ಕಲಂ 78(3) ಕೆ.ಪಿ ಕಾಯ್ದೆ :-

ದಿನಾಂಕ 18/08/2022 ರಂದು ಮದ್ಯಾನ 1345 ಗಂಟೆಗೆ ಪಿಎಸ್ಐ ರವರು ಪೊಲೀಸ ಠಾಣೆಯಲ್ಲಿ ಇದ್ದಾಗ ಟಿ ಮರ್ಜಾಪೂರ ಗ್ರಾಮದ ದರ್ಗಾದ ಹತ್ತಿರ ಒಬ್ಬ ವ್ಯಕ್ತಿ ಸಾರ್ವಜನಿಕರಿಂದ ಹಣ ಪಡೆದು ಮಟ್ಕಾ ಚೀಟಿ ಬರೆದುಕೊಳ್ಳುತಿದ್ದಾನೆ ಅಂತಾ ಖಚಿತ ಬಾತ್ಮಿ ಬಂದ ಮೇರೆಗೆ ಸಿಬ್ಬಂದಿಯೊಂದಿಗೆ ಹೋಗಿ ನೋಡಲಾಗಿ ಅಲ್ಲಿ ವ್ಯಕ್ತಿ ಸಾರ್ವಜನಿಕ ಸ್ಥಳದಲ್ಲಿ ನಿಂತು ಸಾರ್ವಜನಿಕರಿಗೆ ಮಟ್ಕಾ ನಸೀಬಿನ ಜೂಜಾಟ 01 ರೂ. ಗೆ 80 ಅಂತಲೂ ಮತ್ತು 10 ರೂ.ಗೆ 800 ರೂ. ಅಂತಾ ಹೇಳುತ್ತಾ ಸಾರ್ವಜನಿಕರಿಂದ ದುಡ್ಡು ಪಡೆದುಕೊಳ್ಳುತ್ತಾ ಅವರಿಗೆ ಮಟ್ಕಾ ಚೀಟಿ ಬರೆದುಕೊಡುತ್ತಿದ್ದ ಬಗ್ಗೆ ಖಚಿತಪಡಿಸಿಕೊಂಡು ಅವನ ಮೇಲೆ ದಾಳಿ ಮಾಡಿ ಅವನಿಗೆ ಹಿಡಿದು ಹೆಸರು ವಿಳಾಸ ವಿಚಾರಿಸಲಾಗಿ ಅವನು ತನ್ನ ಹೆಸರು ಫಯಾಜ ತಂದೆ ಗುಡುಸಾಬ ವಯ-30 ಜಾ|| ಮುಸ್ಲಿಂ ಉ|| ಕೂಲಿ ಕೆಲಸ ಸಾ|| ಮನ್ನಳಿ ತಾ|| ಜಿ|| ಬೀದರ ಅಂತ ತಿಳಿಸಿರುತ್ತಾನೆ. ನಂತರ ಆತನ ಅಂಗ ಝಡ್ತಿ ಮಾಡಲಾಗಿ ಅವನ ಹತ್ತಿರ 500/- ರೂಪಾಯಿಯ 1 ನೋಟು, 200/- ರೂಪಾಯಿಯ 1 ನೋಟು ಮತ್ತು 10 ರೂಪಾಯಿಯ 9 ನೋಟು ಒಟ್ಟು ರೂ. 790/- ನಗದು ಹಣ ಇದ್ದು ಮತ್ತು 1 ಮಟ್ಕಾ ಚೀಟಿ ಹಾಗೂ ಒಂದು ಬಾಲ್ ಪೆನ್ ಸಿಕ್ಕಿರುತ್ತವೆ. ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

### ಬೇಮಳಖೇಡಾ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 44/2022 ಕಲಂ 78(3) ಕೆಪಿ ಕಾಯ್ದೆ :-

ದಿನಾಂಕ **18-08-2022** ರಂದು **14:00** ಗಂಟೆಗೆ ಪಿಎಸ್.ಐ. ರವರು ಠಾಣೆಯಲ್ಲಿದ್ದಾಗ ಮಾಹಿತಿ ಬಂದಿದ್ದೇನೆಂದರೆ ಕರಕನಳ್ಳಿ ಗ್ರಾಮದ ಬಕ್ಕಪ್ರಭು ಗುಡಿಯ ಎದುರಿಗೆ ಸಾರ್ವಜನಿಕ ರೋಡಿನ ಮೇಲೆ ಒಬ್ಬ ವ್ಯಕ್ತಿ ಸಾರ್ವಜನಿಕ ಸ್ಥಳದಲ್ಲಿ ಮಟಕಾ ಎಂಬ ನಸೀಬಿನ ಜೂಜಾಟ ನಡೆಸುತ್ತಿದ್ದಾನೆ ಅಂತಾ ಮಾಹಿತಿ ಬಂದ ಮೇರೆಗೆ ಸಿಬ್ಬಂದಿಯೊಂದಿಗೆ ಹೋಗಿ ನೋಡಿದಾಗ ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನಿಕರಿಗೆ **1** ರೂಪಾಯಿಗೆ **100** ರೂಪಾಯಿಗಳು ಕೊಡುತ್ತೇನೆ. ಅಂತ ಹೇಳುತಾ ಸಾರ್ವಜನಿಕರಿಂದ ಹಣ ಪಡೆದು ಮಟಕಾ ಚೀಟಿ ಬರೆದುಕೊಳ್ಳುತ್ತಿದ್ದುನ್ನು ಖಚಿತ ಪಡಿಸಿಕೊಂಡು ದಾಳಿ ಮಾಡಿ ಮಟಕಾ ಚೀಟಿ ಬರೆದುಕೊಳ್ಳುತ್ತಿದ್ದವನಿಗೆ ಹಿಡಿದು ಅವನ ಹೆಸರು ವಿಚಾರಿಸಲಾಗಿ ಅವನು ತನ್ನ ಹೆಸರು ಗೌಸೊದ್ದಿನ ತಂದೆ ಖಾಜಾಮಿಯ್ಯಾ ಮೋಜನ ವಯಃ**35** ವರ್ಷ ಜಾತಿಃ ಮುಸ್ಲಿಂ ಉ: ಕೂಲಿ ಕೆಲಸ ಸಾ: ಕರಕನಳ್ಳಿ ಅಂತಾ ತಿಳಿಸಿದ್ದು ಇತನ ವಶದಿಂದ ಮಟಕಾ ಜೂಜಾಟಕ್ಕೆ ಸಂಬಂದಿಸಿದ ನಗದು ಹಣ **3350/** ರೂ ಮತ್ತು ಮಟಕಾ ನಂಬರ್ ಬರೆದ **2** ಮಟಕಾ ಚೀಟಿ ಹಾಗೂ ಒಂದು ಬಾಲ ಪೆನ್ನು ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.